**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ.492/2024**

ಫಿರ್ಯಾದಿಃ ದಿ. ಜನತಾ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿಯಮಿತ,
ಭಟ್ಕಳ, ಶಾಖೆಃ ಬಳಕೂರು ನಿಷ್ಪತ್ ಶಾಖಾ ವ್ಯವಸ್ಥಾಪಕರು,
ಶ್ರೀ ಸಂತೋಷ ದುರ್ಗ ನಾಯ್ಕ,
ಪ್ರಾಯಃ 35 ವರ್ಷ,
ಸಾಕೀನಃ ಮಂಕುಳಿ, ಭಟ್ಕಳ
ಹಾಲಿಃ ಬಳಕೂರು, ತಾಃ ಹೊನ್ನಾವರ (ಉ.ಕ.)

**–ವಿರುದ್ಧ–**

ಆರೋಪಿಃ ಶ್ರೀ ಬಾಲಚಂದ್ರ ರಾಮ ಅಂಬಿಗ,
ಸಾಕೀನಃ ಮನೆ ನಂ. 57, ಬೀರನಗೋಡ,
ಪೋಸ್ಟಃ ಮಾಗೋಡ,
ತಾಲೂಕುಃ ಹೊನ್ನಾವರ (ಉ.ಕ.)

**ಆರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯ ಮೇಲೆ ಈ ಕೆಳಕಂಡ ಆರೋಪಣೆಯನ್ನ ಹೊರಿಸುತ್ತಿದ್ದೇನೆ.

ಆರೋಪಿಯು ಪಿರ್ಯಾದಿಯ ಸಂಸ್ಥೆಯಿಂದ ದಿನಾಂಕಃ 29–08–2020 ರಂದು ರೂ. 1,00,000/– ಸಾಲ ಪಡೆದಿದ್ದು, ಆರೋಪಿತನು ಸದ್ರಿ ಸಾಲದ ಸ್ವಲ್ಪ ಕಂತುಗಳನ್ನು ತುಂಬಿ, ಸದ್ರಿ ಸಾಲವು ಈಗ ಬಡ್ಡಿ ಸಹಿತ ರೂ. 91,000/– ಆಗಿದ್ದು, ಸದರಿ ಸಾಲ ಹಣದ ಮರುಪಾವತಿಗಾಗಿ ಸಿಂಡಿಕೇಟ್ ಬ್ಯಾಂಕ್ ಈಗ ಕೆನರಾ ಬ್ಯಾಂಕ್, ಗುಣವಂತೆ ಶಾಖೆಯ ಆರೋಪಿಯ ಖಾತೆಯ ದಿನಾಂಕಃ 24–06–2021 ರಂದು ಚೆಕ್ ನಂ.080232 ನ ರೂ.91,000/–ಗಳ ಚೆಕ್‌ನ್ನು ನೀಡಿದ್ದು, ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಕಿದ ಕೂಡಲೇ ಹಣ ಬಟವಡೆಯಾಗುತ್ತದೆ ಎಂಬ ಭರವಸೆ ನೀಡಿದ್ದು, ಪಿರ್ಯಾದಿಯು ಆರೋಪಿಯ ಮಾತಿನ ಮೇಲೆ ನಂಬಿಕೆ, ವಿಶ್ವಾಸ ಇಟ್ಟು, ಸದರಿ ಚೆಕ್ಕನ್ನು ಬ್ಯಾಂಕ್ ಗೆ ಸಲ್ಲಿಸಿದಾಗ ಅದು ನಗದೀಕರಣಗೊಳ್ಳದೆ "Funds Insufficient" (ಆರೋಪಿತನ ಖಾತೆಯಲ್ಲಿ ಸಾಕಷ್ಟು ರಖಂ ಇರುವುದಿಲ್ಲ) ಎಂಬ ಲಿಖಿತ ಹಿಂಬರಹದೊಂದಿಗೆ ದಿನಾಂಕಃ 29–06–2021 ರಂದು ವಾಪಾಸ್ ಬಂದಿದ್ದು, ನಂತರ ಪಿರ್ಯಾದಿಯವರು ಚೆಕ್ಕಿನ ಹಣವನ್ನು ವಾಪಾಸು ಮಾಡುವಂತೆ ದಿನಾಂಕಃ

27-07-2021 ರಂದು ರಜಿಸ್ಟರ್ ಅಂಚೆ ಮೂಲಕ ನೋಟಿಸ್ ನೀಡಿದ್ದು, ಅದು ನಿಮಗೆ ದಿನಾಂಕಃ 04-08-2021 ರಂದು ತಲುಪಿದ್ದು, ನೋಟೀಸು ತಲುಪಿದ 15 ದಿವಸಗಳ ಒಳಗಾಗಿ ಪಿರ್ಯಾದಿದಾರರ ಬ್ಯಾಂಕಿಗೆ ತಾನು ಕೊಡಬೇಕಾಗಿದ್ದ ಚೆಕ್ಕಿನಲ್ಲಿ ನಮೂದಿಸಿದಷ್ಟು ಹಣವನ್ನು ಸಂದಾಯ ಮಾಡಿದ್ದಾಗಲೀ, ನೋಟೀಸಿಗೆ ಉತ್ತರ ನೀಡಿದ್ದು ಇರುವುದಿಲ್ಲ, ಹೀಗೆ ಆರೋಪಿಯು ಪಿರ್ಯಾದಿಗೆ ಚೆಕ್ಕಿನಲ್ಲಿ ನಮೂದಿಸಿದಷ್ಟು ಹಣವನ್ನು ನೀಡದೇ ಅವರಿಗೆ ಮೋಸ ಮಾಡಿ ಹಾಗೂ ಲುಕ್ಸಾನನ್ನು ಉಂಟು ಮಾಡಿದ್ದರಿಂದ ಈ ಮೂಲಕ ಆರೋಪಿಯು ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ ಕಲಂ 138 ರ ಪ್ರಕಾರ ಅಪರಾಧ ಎಸಗಿರುತ್ತೀರಿ ಎನ್ನುವ ಆರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ 1. ಮೇಲೆ ಓದಿ ಹೇಳಲಾದ ನಿಮ್ಮ ಮೇಲಿನ ಆರೋಪಣೆಯನ್ನ ಒಪ್ಪಿಕೊಳ್ಳುವಿರಾ?

ಉತ್ತರಃ

ಪ್ರಶ್ನೆ 2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೆ?

ಉತ್ತರಃ

**(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲ್ಕಂಡ ಆರೋಪಣೆಯನ್ನ ನನ್ನ ಸಮಕ್ಷಮ ಆರೋಪಿಗೆ ಓದಿ ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರವನ್ನ ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು.)**

Sd/-

ದಿನಾಂಕಃ 28-03-2026.

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**